ಇದೇಂತ ಗೊತ್ತೇ ಆಗಲ್ಲ..."

"ಒಳ್ಳೇದಲ್ಲಂತೆ ಕಣೇ. ಅದರ ಸಾವಾಸ ಬೇಡ"

"ಏನಾರೂ ಮಾಡ್ಕಳ್ಳಿ, ನಂಗೇನಂತೆ..."

ಗುಲಾಬಿಯ ಕೈಗೆ ತಲೆಗೂದಲು ಒಪ್ಪಿಸಿ, ಅರೆಗಣ್ಣು ಮುಚ್ಚಿ, ಸುಖವಾಗಿ ಕೂತಳು ಪ್ರಭಾವತಿ. ತಿಂಗಳೆರಡು ತಿಂಗಳಿಗೊಮ್ಮೆ ಮದರಂಗಿ ಹಚ್ಚಿಸಿಕೊಳ್ಳುವಾಗಲೆಲ್ಲಾ ಅವಳಿಗೆ ಹಳೆಗಾಲ ನೆನಪಿಗೆ ಬಂದೇ ಬರುತ್ತದೆ. ಈ ನೆನಪುಗಳೇ ಹೀಗೆ. ಯಾವುದರೊಡನೆ ಇನ್ಯಾವುದೋ ಕೊಂಡಿ ಕೂಡಿಸಿಕೊಂಡುಬಿಟ್ಟಿರುತ್ತದೆ. ಅವಳೇನು ಮನಸಾರೆ ಒಪ್ಪಿ ಶ್ರೀಪಾದನನ್ನು ಮದುವೆಯಾದವಳಲ್ಲ. ತನ್ನ ಅಂದಚಂದದ ಬಗ್ಗೆ ಗರ್ವ ಇಟ್ಟುಕೊಂಡಿದ್ದ ಹುಡುಗಿ. ಆದರೆ, ಬಿಂಕಕ್ಕೆ ತಕ್ಕ ಸಿರಿವಂತಿಕೆ ತೌರಿನಲ್ಲಿರಲಿಲ್ಲ. ಅಪ್ಪಯ್ಯನಿಗೆ ತೀರಾ ಎದುರಾಡುವ ಧೈರ್ಯ ಕೂಡಾ. ಮಹಾ ಎದುರುಸಿಟ್ಟಿನ ಮನುಷ್ಯ. 'ಇಕಾ, ನಾನು ಹುಡುಕಿದೋನ ಹತ್ರ ತಾಳಿ ಕಟ್ಟಿಸ್ಕೊಂಡ್ಯೋ ಸೈ. ಇಲ್ದಿದ್ರೆ ಇನ್ನು ನಿನ್ನ ಲಗ್ನದ ವಿಷಯಕ್ಕೆ ನಾನು ತಲೆ ಹಾಕಲ್ಲ' ಕಡ್ಡಿ ಮುರಿದಂತೆ ಹೇಳಿಬಿಟ್ಟಿದ್ದ ಅಪ್ಪಯ್ಯ. ಅವನು ಇಷ್ಟು ಕಠಿಣನಾಗಲು ಕಾರಣವೂ ಇತ್ತು. ಹೆಣ್ಣು ನೋಡಲು ಬಂದವರಿಗೆಲ್ಲಾ ಅವರು ಮನೆಯ ಮೆಟ್ಟಿಲು ಇಳಿಯುತ್ತಿದ್ದಂತೆ ಒಂದೊಂದು ಹೆಸರಿಟ್ಟು ನಿರಾಕರಿಸಿಬಿಡುತ್ತಿದ್ದಳು ಪ್ರಭಾವತಿ. ತನ್ನ ಸೊಗಸಿಗೆ ಯಾರೂ ಸರಿಸಾಟಿಯಾಗಿ ಕಾಣುತ್ತಿರಲಿಲ್ಲ ಅವಳ ಕಣ್ಣಿಗೆ. ಎಷ್ಟು ಹುಡುಕುತ್ತಾನೆ ಅಪ್ಪ? ಬೆಳೆದು ನಿಂತ ಹುಡುಗಿಗೊಂದು ಯೋಗ್ಯ ಗಂಡು ಹುಡುಕುವುದೇ ಹರಸಾಹಸ. ಯಾವುದೋ ಒಂದರಲ್ಲಿ ರಾಜಿಯಾಗಬೇಕಾದ್ದು ಅನಿವಾರ್ಯ. ಶ್ರೀಪಾದ ತೀರಾ ತೆಗೆದು ಹಾಕುವ ಹಾಗೇನಿರಲಿಲ್ಲ. ಮೆದುಗಸ್ಥ ಎನ್ನುವುದು ಅವನ ವರ್ತನೆಯಲ್ಲೇ ಎದ್ದು ಕಾಣುತ್ತಿತ್ತು. ಮನೆಕಡೆ ಕೂಡಾ ಅನುಕೂಲವಾಗಿರುವ ಕುಳ. ಹಳ್ಳಿಮನೆಯಾದರೇನಾಯ್ತು, ಯಾತಕ್ಕೂ ಅರೆ ಇಲ್ಲ. "ಹೂಂ ಅಂದ್ಬಿಡೇ. ಅಪ್ಪಯ್ಯಂಗೆ ಸಿಟ್ಟು ಬರಿಸ್ಬೇಡ" ಅಕ್ಕ ಕೂಡಾ ಹದ ಹೇಳಿದ್ದಳು. ಅವಳಿಗೇನಂತೆ, ಸೋದರಮಾವನನ್ನೇ ಮದುವೆ ಮಾಡಿಕೊಂಡು ಸುಖವಾಗಿದ್ದಾಳೆ. ತನ್ನ ಹಾಗೆ ಅಲಂಕಾರ ಮಾಡಿಕೊಂಡು ಯಾರ್ಯಾರ ಎದುರೋ ಓಡಾಡುವ ಪರಿಸ್ಥಿತಿ ಅವಳಿಗೆ ಬರಲೇ ಇಲ್ಲ. ತನಗೇನಾದರೂ ಆಯ್ಕೆ ಅನ್ನುವುದಿದ್ದರೆ ಸೋದರಮಾವನನ್ನೇ ಆರಿಸಿಕೊಳ್ಳುತ್ತಿದ್ದೆ ಎನ್ನುವ ವಿಚಾರ ಇವತ್ತಿಗೂ ಪ್ರಭಾವತಿಗೆ ಹಿತವೆನಿಸುವಂತಹದ್ದು, ಐವತ್ತಾರರ ಈ ಇಳಿವಯಸ್ಸಿನಲ್ಲೂ. ಆದರೆ, ಅಕ್ಕನ ಹಣೆಯಲ್ಲಿ ಅವನ ಹೆಸರು ಬರೆದಿತ್ತು. ಕುಣಿಯುತ್ತಾ ಮದುವೆ ಮಾಡಿಕೊಂಡು ಹೋದಳು ಅಕ್ಕ. ಅವಳೇನು ತನ್ನಷ್ಟು ಚಂದ ಇದ್ದವಳಲ್ಲ. ಹಣೇಬರವೇ ಬೇರೆ, ಚಂದಗಿಂದ, ದುಡ್ಡುಕಾಸು ಅನ್ನುವ ಲೆಕ್ಕಾಚಾರವೇ ಬೇರೆ. ಜಾತಕದ ಹೆಸರೆತ್ತಿದರೆ ಮೈ ಉರಿ ಹತ್ತುತ್ತದೆ ಪ್ರಭಾವತಿಗೆ. 'ಜಾತಕ ಕೂಡಿ ಬರುತ್ತದೆ' ಎನ್ನುವ ನೆಪದಲ್ಲಿ ಯಾರ್ಯಾರ ಕೈಲೋ ತಾಳಿ ಕಟ್ಟಿಸಿಕೊಳ್ಳುವ ಹಾಗೆ ಮಾಡಿಬಿಡುತ್ತದೆ ವಿಧಿ. ಮೊದಲ ನೋಟದಲ್ಲೇ ಶ್ರೀಪಾದನನ್ನು ನಪಾಸು ಮಾಡಿದ್ದಳು ಪ್ರಭಾವತಿ. "ಇನ್ನೊಂದೆರಡು ವರ್ಷ ಅಂದ್ರೆ ಮುಂದಲೆ ಕೂದಲು ಉದುರಿ ಬೋಳಾಗುತ್ತೆ, ನೋಡಿದ್ರೆ ಗೊತ್ತಾಗಲ್ವಾ?" ಎನ್ನುವುದು ಅವಳಿಗಿದ್ದ ಸಕಾರಣ. "ಹಳೇ ಚಾಳಿ" ಎಂದು ಗುರುಗುಟ್ಟಿದ್ದ ಅಪ್ಪಯ್ಯ. ಆ ಸಲದ ವಧೂಪರೀಕ್ಷೆಯ ಸಂದರ್ಭದಲ್ಲಿ ಸೋದರಮಾವ ಶ್ರೀನಿವಾಸ ಹಾಜರಾಗಿದ್ದುದೊಂದು ಯೋಗಾಯೋಗ. ಅಥವಾ ವಿಪರ್ಯಾಸ. 'ನೀನಾದ್ರೂ ಬುದ್ಧಿ ಹೇಳು' ಎನ್ನುವಂತೆ ಅಳಿಯನ ಕಡೆ ನೋಡಿದ್ದ ಅಪ್ಪಯ್ಯ.

"ಸುಮ್ನೆ ಒಪ್ಗಳೇ. ಅವನನ್ನ ನೋಡಿದ್ರೆ ಗೊತ್ತಾಗುತ್ತೆ, ಬರೀ ಪಾಪದೋನು. ಮುಂದೆ ಮನೆ ಯಜಮಾಂತಿ ನೀನೇ ಆಗ್ತಿ, ಬರೆದಿಟ್ಕೋ ಬೇಕಾರೆ..." ಬೆಣ್ಣೆ ಹಚ್ಚಿದ್ದ ಶೀನಿ ಮಾವ. ತನ್ನ ಸಪೋರ್ಟಿಗೆ ಒಬ್ಬ ಸಿಕ್ಕಿದ್ದೇ ಮತ್ತಷ್ಟು ಬಿಗುವಾಗಿದ್ದ ಅಪ್ಪ. 'ಇನ್ನು ನಿನ್ನ ಲಗ್ನದ ವಿಷಯಕ್ಕೆ ತಲೆ ಹಾಕಲ್ಲ' ಅನ್ನುವಂತಹ ಮಾತಾಡಿದ್ದು ಆಗಲೇ. ಮಾವ ಹೇಳಿದ ಮಾತಿನ ಜೊತೆ ಅಪ್ಪ ಖಡಕ್ಕಾಗಿದ್ದೂ